ಸಂ: ಎಎಲ್‌ಎನ್(ಎಸ್‌ಎ)ಎಸ್‌ಆರ್/202/15-16

ಜಿಲ್ಲಾಧಿಕಾರಿಗಳವರ ಕಾರ್ಯಾಲಯ
ಬೆಂಗಳೂರು ಜಿಲ್ಲೆ
ಬೆಂಗಳೂರು, ದಿನಾಂಕ: 18/10/2016

:: <u>ಅಧಿಕೃತ ಜ್ಞಾಪನ</u> ::

ವಿಷಯ: ಬೆಂಗಳೂರು ಜಿಲ್ಲೆ, ಬೆಂಗಳೂರು ಉತ್ತರ (ಅಪರ) ತಾಲ್ಲೂಕು, **ಯಲಹಂಕ ಹೋಬಳಿ, ಅಮೃತಹಳ್ಳಿ ಗ್ರಾಮದ ಸ.ನಂ. 33/6 ರಲ್ಲಿ 0–07.08 ಗುಂಟೆ, 40/1 ರಲ್ಲಿ 0–15 ಗುಂಟೆ, ಸ.ನಂ. 40/5 ರಲ್ಲಿ 0–05.08 ಗುಂಟೆ ಮತ್ತು ಸ.ನಂ. 40/6 ರಲ್ಲಿ 0–06.08 ಗುಂಟೆ ಒಟ್ಟು 0–34.08 ಗುಂಟೆ** ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ **ವಾಸದ** ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ **ಶ್ರೀ ಕೆ. ಶ್ರೀರಾಮಪ್ಪ ಬಿನ್ ಕೊಂಡಪ್ಪ, ಶ್ರೀ ಟಿ. ಕೃಷ್ಣಪ್ಪ ಬಿನ್ ತಿಮ್ಮಯ್ಯ, ಶ್ರೀ ಟಿ. ವೆಂಕಟೇಶ ಬಿನ್ ಟಿ. ಕೃಷ್ಣಪ್ಪ, ಶ್ರೀ ಕೆ. ನಾಗೇಶ್‌ಬಾಬು ಬಿನ್ ಟಿ. ಕೃಷ್ಣಪ್ಪ ಮತ್ತು ಶ್ರೀಮತಿ ನಿರ್ಮಲ ಕೋಂ ಲೇಟ್ ಟಿ. ಶಂಕರ್ ರವರುಗಳು** ಸಲ್ಲಿಸಿರುವ ಅರ್ಜಿ ದಿ: 09/02/2015

ಉಲ್ಲೇಖ:
1) ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್.ಡಿ. 7 ಎಲ್‌ಜಿಪಿ 95 ದಿ: 07–06–1999
2) ಸರ್ಕಾರದ ಸುತ್ತೋಲೆ ಪತ್ರ ಸಂಖ್ಯೆ: ಆರ್.ಡಿ.56 ಎಲ್.ಜಿ.ಪಿ:2008 ದಿ: 10–9–2008 ಮತ್ತು 24–9–2008
3) ತಹಶೀಲ್ದಾರ್. ಬೆಂಗಳೂರು ಉತ್ತರ (ಅಪರ) ತಾಲ್ಲೂಕು ರವರ ವರದಿ ಸಂಖ್ಯೆ: ಎಎಲ್‌ಎನ್(ಎಸ್‌ಎ)ಎಸ್‌ಆರ್/175/15–16 ದಿನಾಂಕ: 18/04/2016
4) ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರ ಯೋಜನಾ ವಿಭಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರುರವರ ಪತ್ರದ ಸಂ: ಬೆಂಅಪ್ರಾ/ನಯೋಸ/ಸಿ.ಎಲ್–/137/212/16–17, ದಿನಾಂಕ: 21/05/2016, ಉಪ ಆಯುಕ್ತರು(ಭೂ.ಸ್ವಾ), ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ರವರ ಪತ್ರದ ಸಂ: ಬೆಂಅಪ್ರಾ/ಉಪ(ಭೂ.ಸ್ವಾ)/154/15–16, ದಿನಾಂಕ: 16/05/2016 ಮತ್ತು ವಿಶೇಷ ಭೂ ಸ್ವಾಧೀನಾಧಿಕಾರಿಗಳು, ಮೋಡಿಯಂ ಬ್ಲಾಕ್, ಬೆಂಗಳೂರು ರವರ ಪತ್ರ ಸಂ: ಎಸ್‌ಎಲ್‌ಎ./ಜಿಎಲ್/248/16–17, ದಿ: 5/05/2016 ಹಾಗೂ ವಿಶೇಷ ಭೂ ಸ್ವಾಧೀನಾಧಿಕಾರಿ–2, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಖನಿಜ ಭವನ, ಬೆಂಗಳೂರು ರವರ ಪತ್ರ ಸಂ: ಬೆಂಗಳೂರು/ವಿಭೂಸ್ವಾಅ/550/16–17, ದಿ: 24/05/2016
5) ಭೂ ಪರಿವರ್ತನಾ ಶುಲ್ಕ ರೂ. 46,964/– ಮತ್ತು ಪೋಡಿ ಶುಲ್ಕ ರೂ. 220/– ಒಟ್ಟು 47,184/–ರೂಗಳನ್ನು, ಚಲನ್ ನಂ. 138 ರಂತೆ ದಿ: 27/09/2016 ರಂದು ಎಸ್.ಬಿ.ಎಂ. ಬೆಂಗಳೂರು ಇಲ್ಲಿ ಅರ್ಜಿದಾರರು ಜಮಾ ಮಾಡಿರುತ್ತಾರೆ.

****

ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ಕಲಂ 95(2), 95(4) ಮತ್ತು 95(7)ರ ಷರತ್ತುಗಳು ಹಾಗೂ ಈ ಕೆಳಕಂಡ ಷರತ್ತುಗಳಿಗೊಳಪಡಿಸಿ, ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ನಿಯಮಗಳು 1994ರ ನಿಯಮ 107(1)ರಂತೆ **ವಾಸದ** ಉದ್ದೇಶಕ್ಕೆ ಎಕರೆ ಒಂದಕ್ಕೆ ರೂ 54,450/–(ಐವತ್ನಾಲ್ಕು ಸಾವಿರದ ನಾಲ್ಕು ನೂರ ಐವತ್ತು ರೂಪಾಯಿಗಳು ಮಾತ್ರ) ಗಳಂತೆ ಅರ್ಜಿದಾರರು ಉಲ್ಲೇಖ (5) ರಲ್ಲಿ ನಮೂದಿಸಿರುವಂತೆ ಹಣವನ್ನು ಜಮಾ ಮಾಡಿದ ಮೇರೆಗೆ ಅರ್ಜಿದಾರರಾದ **ಶ್ರೀ ಕೆ. ಶ್ರೀರಾಮಪ್ಪ ಬಿನ್ ಕೊಂಡಪ್ಪ, ಶ್ರೀ ಟಿ. ಕೃಷ್ಣಪ್ಪ ಬಿನ್ ತಿಮ್ಮಯ್ಯ, ಶ್ರೀ ಟಿ. ವೆಂಕಟೇಶ ಬಿನ್ ಟಿ. ಕೃಷ್ಣಪ್ಪ, ಶ್ರೀ ಕೆ. ನಾಗೇಶ್‌ಬಾಬು ಬಿನ್ ಟಿ. ಕೃಷ್ಣಪ್ಪ ಮತ್ತು ಶ್ರೀಮತಿ ನಿರ್ಮಲ ಕೋಂ ಲೇಟ್ ಟಿ. ಶಂಕರ್, ಅಮೃತಹಳ್ಳಿ ಗ್ರಾಮ, ಯಲಹಂಕ ಹೋಬಳಿ, ಬೆಂಗಳೂರು ಉತ್ತರ (ಅಪರ) ತಾಲ್ಲೂಕು** ರವರ ಅರ್ಜಿಯನ್ನು ಪರಿಗಣಿಸಿ, ಬೆಂಗಳೂರು ಉತ್ತರ (ಅಪರ) ತಾಲ್ಲೂಕು, **ಯಲಹಂಕ ಹೋಬಳಿ, ಅಮೃತಹಳ್ಳಿ ಗ್ರಾಮದ ಸ.ನಂ. 33/6 ರಲ್ಲಿ 0–07.08 ಗುಂಟೆ, 40/1 ರಲ್ಲಿ 0–15 ಗುಂಟೆ, ಸ.ನಂ. 40/5 ರಲ್ಲಿ 0–05.08 ಗುಂಟೆ ಮತ್ತು ಸ.ನಂ. 40/6 ರಲ್ಲಿ 0–06.08 ಗುಂಟೆ ಒಟ್ಟು 0–34.08 ಗುಂಟೆ** ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ **ವಾಸದ** ಉದ್ದೇಶಕ್ಕಾಗಿ ಬಳಸಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಭೂ ಪರಿವರ್ತನಾ ಆದೇಶವನ್ನು ಹೊರಡಿಸಲಾಗಿದೆ.

1. ಈ ಭೂಮಿಯು ಯಾವ ಉದ್ದೇಶಕ್ಕಾಗಿ ಪರಿವರ್ತನೆಯಾಗಿದೆಯೋ ಆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಲು ಸಕ್ಷಮ ಪ್ರಾಧಿಕಾರಿಯಿಂದ ಅಂದರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ /ಬಿಎಂ.ಆರ್.ಡಿ.ಎ (ಸ್ಥಳೀಯ ಯೋಜನಾ ಪ್ರಾಧಿಕಾರ),ಬಿ.ಎಂ.ಪಿ.ಸಿ.ಎ.ಪಿ.ಎ/ಮಾಲಿನ್ಯ ನಿಯಂತ್ರಣ ಮಂಡಳಿ ರವರಿಂದ ಮಂಜೂರಾತಿಯನ್ನು ಪಡೆಯದ ಹೊರತು ಈ ಆದೇಶವು ಅನುಭವದಾರನಿಗೆ ಯಾವುದೇ ಹಕ್ಕನ್ನು ನೀಡುವುದಿಲ್ಲ.

2. ಈ ಪರಿವರ್ತಿತ ಜಮೀನನ್ನು ವ್ಯವಸಾಯೇತರ **ವಾಸದ** ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು. ಈ ಜಮೀನನ್ನು ಪೂರ್ವಾನುಮತಿ ಇಲ್ಲದೆ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬಾರದು.

3. ಈ ಜಮೀನಿನಲ್ಲಿ ಉದ್ದೇಶಿಸಿರುವ ಬಡಾವಣೆ ನಕ್ಷೆ ಹಾಗೂ ಪರವಾನಗಿ ಇತ್ಯಾದಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ/ಬಿಎಪಿಪಿಎ/ಬಿಬಿಎಂ.ಆರ್.ಡಿ.ಎ (ಸ್ಥಳೀಯ ಯೋಜನಾ ಪ್ರಾಧಿಕಾರ), ಬಿ.ಎಂ.ಪಿ.ಸಿ. ಎ.ಪಿ.ಎ /ಪ್ರಾಧಿಕಾರದಿಂದ ಅನುಮೋದಿಸಿಕೊಂಡು ಆ ನಂತರ ಅನುಮೋದನೆಗೊಂಡ ನಕ್ಷೆಗೆ ಅನುಗುಣವಾಗಿ ಕಟ್ಟಡವನ್ನು ಕಟ್ಟುವುದು. ಸದರಿ ಜಮೀನಿನಲ್ಲಿ ಲೇಔಟ್ ಪ್ಲಾನಿಗೆ ಅನುಮೋದನೆ ಪಡೆಯದೆ ಪರಭಾರೆ ಮಾಡಕೂಡದು.

4. ಭೂ ಪರಿವರ್ತನೆ ಕೋರಿರುವ ಜಮೀನಿನಲ್ಲಿ ಮೂಲಭೂತ ಸೌಕರ್ಯಗಳಿಗೆ ನಿಗಧಿಪಡಿಸಲಾದ ಅಂದರೆ ರಸ್ತೆ ಜಾಗ, ರಸ್ತೆ ಮಾರ್ಜಿನ್, ಉದ್ಯಾನವನ, ಸಿ.ಎ. ನಿವೇಶನ, ಖಾಲಿ ಜಾಗ ಇತ್ಯಾದಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ /ಬಿ.ಎ.ಪಿಪಿಎ /ಬಿ.ಎಂ.ಆರ್.ಡಿ.ಎ (ಸ್ಥಳೀಯ ಯೋಜನಾ ಪ್ರಾಧಿಕಾರ) ಬಿ.ಎಂ.ಪಿ.ಸಿ.ಎ.ಪಿ.ಎ. ಪ್ರಾಧಿಕಾರದಿಂದ ಅನುಮೋದಿಸಿದ ಬಡಾವಣೆ ನಕ್ಷೆ ಪ್ರಕಾರ ಹಾಗೂ ನಿರ್ದಿಷ್ಟ ಪಡಿಸಿದ ನಿಯಮಗಳ ರೀತ್ಯಾ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸಿ ಸಕ್ಷಮ ಪ್ರಾಧಿಕಾರಗಳಿಗೆ ಪರಿತ್ಯಾಗ ಪತ್ರ (Relinquish Deed) ಮಾಡಿಕೊಡತಕ್ಕದ್ದು. ಹಾಗೂ ಸ್ಥಳೀಯ ಯೋಜನಾ ಪ್ರಾಧಿಕಾರ ವಿಧಿಸಿರುವ ಷರತ್ತುಗಳಿಗೊಳಪಟ್ಟಿರುತ್ತದೆ.

5. ಸಂಬಂಧಪಟ್ಟ ಪ್ರಾಧಿಕಾರದಿಂದ ಅನುಮೋದಿತ ನಕ್ಷೆ ಪಡೆಯದೆ ನಿವೇಶನಗಳನ್ನು/ ಕಟ್ಟಡಗಳನ್ನು ಸಂಬಂಧಪಟ್ಟ ನೊಂದಾವಣಾಧಿಕಾರಿಗಳಿಂದ/ಉಪನೋಂದಣಾಧಿಕಾರಿಗಳಿಂದ ನೊಂದಾವಣೆ ಮಾಡತಕ್ಕದ್ದಲ್ಲ. ಅರ್ಜಿದಾರರು ಒಂದು ವೇಳೆ ಭೂ ಪರಿವರ್ತನೆ ಮಂಜೂರು ಮಾಡಿರುವ ಜಮೀನಿಗೆ ಪೂರಾ ವಿಸ್ತೀರ್ಣವನ್ನು ಮಾರಾಟ ಮಾಡಲು ಉದ್ದೇಶಿಸಿದ್ದಲ್ಲಿ ಈ ಆದೇಶ ಅಡ್ಡಿ ಬರುವುದಿಲ್ಲ.

6. ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಜಮೀನಿನಲ್ಲಿ ನಿವೇಶನದಾರರಿಗೆ ನಾಗರೀಕ ಸೌಲಭ್ಯಗಳಾದ ವಿದ್ಯುಚ್ಛಕ್ತಿ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ ಇತ್ಯಾದಿಗಳನ್ನು ಆರೋಗ್ಯ ನೈರ್ಮಲೀಕರಣ ಹಾಗೂ ಭದ್ರತೆಗಳ ಉದ್ದೇಶದಿಂದ ಎಲ್ಲಾ ಸೌಲಭ್ಯಗಳನ್ನು ಕಾನೂನು ರೀತ್ಯಾ ಒದಗಿಸಿಕೊಡುವುದು ಅರ್ಜಿದಾರರ ಜವಾಬ್ದಾರಿಯಾಗಿರುತ್ತದೆ.

7. **ಸದರಿ ಜಮೀನಿಗೆ ಹಕ್ ಫೋಟ್ ಖರಾಬು ಇದ್ದಲ್ಲಿ**, ಇದನ್ನು ಕರ್ನಾಟಕ ಭೂ ಕಂದಾಯ ಕಾಯಿದೆ 1964 ರ ಕಲಂ 67 ರಂತೆ ಸರ್ಕಾರಕ್ಕೆ ಕಾಯ್ದಿರಿಸತಕ್ಕದ್ದು. ತಹಶೀಲ್ದಾರ್‌ರವರು ಈ ಬಾಬ್ತು ಆರ್.ಟಿ.ಸಿಯಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.

8. ಸರ್ಕಾರದ ಆದೇಶ ಸಂಖ್ಯೆ: ಪಿಡಬ್ಲ್ಯೂಡಿ7556–665 ಆರ್ ಮತ್ತು ಬಿ–6–54–5 ಮತ್ತು ಕೇಂದ್ರ ಸರ್ಕಾರದ ಸಾರಿಗೆ ಇಲಾಖೆಯ ಪತ್ರದ ನಂ.ಪಿ 1/7(11) 67, ದಿನಾಂಕ: 1.1.1966 ರಂತೆ ಸರ್ಕಾರವು ಕಾಲಕಾಲಕ್ಕೆ ನೀಡುವ ಆದೇಶದಂತೆ ಈ ಜಮೀನಿನಲ್ಲಿ ಕಟ್ಟಲು ಉದ್ದೇಶಿಸಿರುವ ಕಟ್ಟಡವು ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ 40 ಮೀಟರ್‌ಗಳ ಅಂತರವನ್ನು ಮತ್ತು ಜಿಲ್ಲಾ ಹೆದ್ದಾರಿಗೆ ಹಾಗೂ ರಾಜ್ಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ 25 ಮೀಟರ್‌ಗಳ ಅಂತರವನ್ನು ಕಾದಿರಿಸಬೇಕು ಹಾಗೂ ಈ ಖಾಲಿ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದು.

9. ಈ ಭೂ ಪರಿವರ್ತನಾ ಜಮೀನಿನಲ್ಲಿ ಸ್ಥಾಪಿಸಲಾಗುವ ಕೈಗಾರಿಕಾ ಘಟಕಗಳು ಹೊರಸೂಸುವ ಹೊಗೆ,ಅನಿಲ, ಇತರೆ ಕಲ್ಮಶಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಿ ಸಾರ್ವಜನಿಕರ ಆರೋಗ್ಯಕ್ಕೆ ಯಾವುದೇ ರೀತಿಯ ಹಾನಿಯಾಗದಂತೆ ಹಾಗೂ ಪರಿಸರ ಮಾಲಿನ್ಯವಾಗದಂತೆ ನೋಡಿಕೊಳ್ಳತಕ್ಕದ್ದು. ಕೈಗಾರಿಕಾ ಉದ್ದೇಶಕ್ಕಾಗಿ ಭೂ ಪರಿವರ್ತಿತ ಜಮೀನಿನಲ್ಲಿ ಸ್ಥಾಪಿಸುವ ಕೈಗಾರಿಕಾ ಘಟಕಗಳು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಪರಿಸರ ಇಲಾಖೆಯ ಅನುಮತಿ ಹೊಂದಿರತಕ್ಕದ್ದು.

10. ಈ ಆದೇಶವು ಸದರಿ ಜಮೀನಿಗೆ ಸಂಬಂಧಪಟ್ಟಂತೆ ಯಾವುದೇ ನ್ಯಾಯಾಲಯದಲ್ಲಿನ ದಾವೆ/ ರಿಟ್ ಅರ್ಜಿ ಮೇಲ್ಮನವಿಯ ತೀರ್ಪಿಗೆ ಒಳಪಟ್ಟಿರುತ್ತದೆ.

11. ಪರಿಷ್ಕೃತ ಮಾಸ್ಟರ್ ಪ್ಲಾನ್ –2015 ರಲ್ಲಿ ಸೂಕ್ಷ್ಮ ವಲಯ (Sensitive Zone) ದಲ್ಲಿ ಬರುವ ಪ್ರದೇಶಗಳಿಗೆ ಸಂಬಂಧಪಟ್ಟ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೇ ಉದ್ದೇಶಿತ ಜಾಗದಲ್ಲಿ ಯಾವುದೇ ರೀತಿಯ ಅಭಿವೃದ್ಧಿಯನ್ನು ಕೈಗೊಳ್ಳಬಾರದು. ಉದ್ದೇಶಿತ ಜಾಗದಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಬೇಕಾದಲ್ಲಿ ಪ್ರಾಧಿಕಾರದಿಂದ ರಚಿತವಾದ ಉಪ ಸಮಿತಿಯ ನಿರ್ಣಯದಂತೆ ನಕ್ಷೆಗಳನ್ನು ಅನುಮೋದಿಸಿಕೊಳ್ಳತಕ್ಕದ್ದು.

12. ಪ್ರಶ್ನಿತ ಜಮೀನು ಮಂಜೂರಾದ ಯಾವುದೇ ಸರ್ಕಾರಿ ಜಮೀನಾಗಿದ್ದಲ್ಲಿ, ಪಕ್ಕಾ ಪೋಡಿಯಾಗದ ಮತ್ತು ಪಕ್ಕಾ ಪೋಡಿ ಮಾಡಿಸಿಕೊಳ್ಳದೇ ತಪ್ಪು ಮಾಹಿತಿ ನೀಡಿ ಭೂ ಪರಿವರ್ತನೆ ಆದೇಶ ಪಡೆದಿದ್ದು ಕಂಡುಬಂದಲ್ಲಿ, ಸದರಿ ಆದೇಶವನ್ನು ರದ್ದುಗೊಳಿಸಲಾಗುವುದು.

13. ಅರ್ಜಿದಾರರು ಯಾವುದೇ ಸತ್ಯಾಂಶಗಳನ್ನು ಮರೆ ಮಾಚಿ, ಅನಧಿಕೃತ ದಾಖಲೆಗಳ ಮೂಲಕ ಈ ಅಧಿಕೃತ ಜ್ಞಾಪನವನ್ನು ಪಡೆದಿರುವುದು ಸ್ಪಷ್ಟವಾದಲ್ಲಿ ತಕ್ಷಣ ರದ್ದುಗೊಳ್ಳುತ್ತದೆ. ಹಾಗೂ ಇದರಿಂದ ಅರ್ಜಿದಾರರಿಗಾಗಲೀ ಅಥವಾ ಅವರ ಉತ್ತರಾಧಿಕಾರಿಗಳಿಗಾಗಲೀ ಆಗುವ ಯಾವುದೇ ಬಗೆಯ ನಷ್ಟಗಳಿಗಾಗಲೀ ಅಥವಾ ಈ ಪ್ರಾಧಿಕಾರವಾಗಲೀ ಯಾವುದೇ ರೀತಿಯ ಜವಾಬ್ದಾರರಾಗುವುದಿಲ್ಲ. ಇದರ ಪೂರ್ಣ ಹೊಣೆಗಾರಿಕೆ ಅರ್ಜಿದಾರರದ್ದೇ ಆಗಿರುತ್ತದೆ.

14. ಪ್ರಶ್ನಿತ ಜಾಗದಲ್ಲಿ ಸರ್ಕಾರಿ ಜಮೀನು ಒತ್ತುವರಿಗೆ ಒಳಪಟ್ಟಿದ್ದಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 136(3) ರ ಅಡಿ ವಿಚಾರಣೆ ನಡೆಸಿ, ಹೊರಡಿಸುವ ತೀರ್ಮಾನಕ್ಕೆ ಒಳಪಟ್ಟಿರುತ್ತದೆ.

15. ಪ್ರಸ್ತಾವಿತ ಜಮೀನಿನ ಬಗ್ಗೆ ಯಾವುದೇ ಭೂ ಸ್ವಾಧೀನ ಪ್ರಕ್ರಿಯೆಗೆ ಒಳಪಟ್ಟಲ್ಲಿ ಈ ಪ್ರಾಧಿಕಾರವು ಜವಾಬ್ದಾರಿಯಾಗುವುದಿಲ್ಲ.

16. ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರ ಯೋಜನಾ ವಿಭಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ರವರ ದಿ: 21/05/2016ರ ಪತ್ರದಲ್ಲಿ ತಿಳಿಸಿರುವ ಷರತ್ತುಗಳಿಗೆ ಒಳಪಟ್ಟಿರುತ್ತದೆ.

17. ಈ ಆದೇಶವು ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯ ಮೂಲ ಅರ್ಜಿ ಸಂ: 222/2014, ದಿ: 04/05/2016ರ ಆದೇಶದಂತೆ ಕೆರೆ, ಕೈಮಡು, ನೀರುವರಿ, ಕಾಲುವೆ ಪ್ರದೇಶಗಳಲ್ಲಿ ನಿಗದಿತ ಬಫರ್ ಜೋನ್ ಬಿಟ್ಟು ಹಾಗೂ ಸದರಿ ಪ್ರದೇಶದಲ್ಲಿ ಅಭಿವೃದ್ಧಿ ಚಟುವಟಿಕೆಗಳು ಮಾಡುವುದಿಲ್ಲ ಷರತ್ತಿಗೆ ಒಳಪಟ್ಟಿರುತ್ತದೆ.

18. ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಭೂ ಪರಿವರ್ತನೆ ಆದೇಶ ಯಾವುದೇ ಸೂಚನೆ ನೀಡದೆ ರದ್ದುಗೊಳಿಸಲಾಗುವುದು ಮತ್ತು ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಕಲಂ 96 ರಂತೆ ದಂಡ ವಿಧಿಸಿ ಕಾನೂನು ರೀತ್ಯಾ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಅಲ್ಲದೆ ಈ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿದ ಕಟ್ಟಡಗಳನ್ನು ಯಾವುದೇ ಪರಿಹಾರ ನೀಡದೆ ಕೆಡವಲು ಕ್ರಮ ಕೈಗೊಳ್ಳಲಾಗುವುದು. ಹಾಗೂ ಇದಕ್ಕೆ ತಗಲುವ ವೆಚ್ಚವನ್ನು ಭೂ ಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲಿ ಮಾಡಲಾಗುವುದು.

:: ಶೆಡ್ಯೂಲ್ ವಿವರ ::

ಬೆಂಗಳೂರು ಜಿಲ್ಲೆ, ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಯಲಹಂಕ ಹೋಬಳಿ, ಅಮೃತಹಳ್ಳಿ ಗ್ರಾಮದ ಸ.ನಂ. 33/6 ರಲ್ಲಿ 0–07.08 ಗುಂಟೆ, 40/1 ರಲ್ಲಿ 0–15 ಗುಂಟೆ, ಸ.ನಂ. 40/5 ರಲ್ಲಿ 0–05.08 ಗುಂಟೆ ಮತ್ತು ಸ.ನಂ. 40/6 ರಲ್ಲಿ 0–06.08 ಗುಂಟೆ ಒಟ್ಟು 0–34.08 ಗುಂಟೆ ವಿಸ್ತೀರ್ಣದ ಪ್ರಶ್ನಿತ ಜಮೀನನ್ನು ವಸತಿ ಉದ್ದೇಶದ ಭೂ ಪರಿವರ್ತಿತ ಜಮೀನಿಗೆ ಚಕ್ಕುಬಂದಿ.

:: ಚಕ್ಕುಬಂದಿ ::

| ಸ.ನಂ. | ವಿಸ್ತೀರ್ಣ | ಪೂರ್ವಕ್ಕೆ | ಪಶ್ಚಿಮಕ್ಕೆ | ಉತ್ತರಕ್ಕೆ | ದಕ್ಷಿಣಕ್ಕೆ |
|---|---|---|---|---|---|
| 33/6 | 0–07.08 ಗುಂಟೆ | ಸ.ನಂ. 41ರ ಜಮೀನು | ಸ.ನಂ. 33/1ರ ಬಾಕಿ ಜಮೀನು | ಸ.ನಂ. 33/1ರ ಜಮೀನು | ಸ.ನಂ. 41ರ ಜಮೀನು |
| 40/1 | 0–03.08 ಗುಂಟೆ | ಸ.ನಂ. 41ರ ಜಮೀನು | ಸ.ನಂ. 40/1ರ ಬಾಕಿ ಜಮೀನು | ರಸ್ತೆ | ಸ.ನಂ. 40/5ರ ಜಮೀನು |
| 40/1 | 0–02 ಗುಂಟೆ | ಸ.ನಂ. 41ರ ಜಮೀನು | ಸ.ನಂ. 40/1ರ ಬಾಕಿ ಜಮೀನು & ರಸ್ತೆ | ಸ.ನಂ. 40/1ರ ಬಾಕಿ ಜಮೀನು | ಸ.ನಂ. 40/1ರ ಬಾಕಿ ಜಮೀನು |
| 40/1 | 0–05.08 ಗುಂಟೆ | ಸ.ನಂ. 41ರ ಜಮೀನು | ಸ.ನಂ. 40/1ರ ಬಾಕಿ ಜಮೀನು | ಸ.ನಂ. 33ರ ಜಮೀನು | ರಸ್ತೆ |
| 40/5 | 0–05.08 ಗುಂಟೆ | ಸ.ನಂ. 41 & 39ರ ಜಮೀನು | ಸ.ನಂ. 40/5ರ ಬಾಕಿ ಜಮೀನು | ಸ.ನಂ. 40/1ರ ಜಮೀನು | ಸ.ನಂ. 40/6ರ ಜಮೀನು |
| 40/6 | 0–06.08 ಗುಂಟೆ | ಸ.ನಂ. 39ರ ಜಮೀನು | ಸ.ನಂ. 34ರ ಜಮೀನು | ಸ.ನಂ. 40/5 & 40/6ರ ಬಾಕಿ | ಸ.ನಂ. 40/7ರ ಜಮೀನು |

ಸಹಿ/-
(ವಿ. ಶಂಕರ್)
ಜಿಲ್ಲಾಧಿಕಾರಿಗಳು
ಬೆಂಗಳೂರು ಜಿಲ್ಲೆ, ಬೆಂಗಳೂರು